

ಬಿದ್ದ ಕೂದಲನ್ನು ಸರಿಯಾಗಿ ಎತ್ತಿಕೊಂಡು ಹೋಗಿ ದೂರ ಸುರಿಯದೆ ಮನೆಗೆ ಬಂದುಬಿಟ್ಟನಂತೆ. ಅದನ್ನು ನೋಡಿ ಆ ಊರವರು ಹೋಗಲಿಬಿಡು ಅಂತ ಸುಮ್ಮನಿರದೆ ಜಿದ್ದಿಗೆ ಬಿದ್ದು ಮರುದಿನವೇ ನಮ್ಮ ತಾತ ಇರುವಲ್ಲಿಗೆ ಮನುಷ್ಯನನ್ನು ಕಳಿಸಿದರಂತೆ ತಗಾದೆ ತೆಗೆಯಲು. ಆ ಮನುಷ್ಯ ನೇರವಾಗಿ ನಮ್ಮ ಮನೆಗೆ ಬಂದು ನಮ್ಮ ಅಜ್ಜಿಯ ಎದುರೇ ಆತನನ್ನು ಹಿಡಿದುಕೊಂಡು, 'ಕತ್ತರಿಸಿದ ಕೂದಲು ಯಾವನು ಎತ್ತಿಹಾಕ್ತಾನೋ? ನಿನ್ ಹೆಂಡತಿ ಮಿಂಡಗಾರನಾ?' ಅಂದನಂತೆ. ಅಷ್ಟು ದೊಡ್ಡ ಮಾತಿಗೆ ನಮ್ಮ ತಾತ ಬಾಧೆಪಡಲಿಲ್ಲ. ಕೋಪಗೊಳ್ಳಲಿಲ್ಲ. ಅಮಾಯಕವಾಗಿ ನಕ್ಕು, 'ಅಂಗಾ ಸೋಮಿ... ಕತ್ತಲಲ್ಲಿ ನೋಡಿಕೆಳ್ಳಿಲ್ಲ ದೇವರು' ಅಂದು ಮತ್ತೆ ಅಷ್ಟು ದೂರ ನಡೆದುಕೊಂಡು ಹೋಗಿ ಆ ಕೂದಲುಗಳನ್ನೆಲ್ಲ ಬಾಚಿಕೊಂಡು ಚೀಲದಲ್ಲಿ ಕಟ್ಟಿಕೊಂಡು ಮನೆಗೆ ಬಂದನಂತೆ. ಅದೇ ಕೊನೆ. ಆಮೇಲೆ ನಮ್ಮಪ್ಪ ನಮ್ಮ ತಾತನ ಜೊತೆ ಸೇರಿ ಎಂದೂ ಕೆಲಸಕ್ಕೆ ಹೋಗಲಿಲ್ಲ. ಶಾಲೆಗೆ ಹೋದ.